ಗೋಪೀನಾಥ ರಾವ್

# ಸಿಂಹಾಸನ

ಆತನ ಹೆಸರು ಅಬ್ದುಲ್ಲ. ಅರಬ್ ಸಂಪ್ರದಾಯದಂತೆ ಹೇಳುವುದಾದರೆ ಅಬ್ದುಲ್ಲ ಬಿನ್ ಅಸಾದ್ ಶೇಖ್. ಅಸಾದ್ ಆತನ ತಂದೆಯ ಹೆಸರು. ಶೇಖ್ ಆತನ ಕುಟುಂಬವನ್ನು ಸೂಚಿಸುವ ಹೆಸರು. ಒಮಾನಿ ಮೂಲದ ಅಲೆಮಾರಿ (ಬೆದುವಿನ್) ಜನಾಂಗದವನಾಗಿದ್ದರೂ ಅಲೆಮಾರಿ ಬುಡಕಟ್ಟೊಂದರ ರಾಜ ಕುಟುಂಬವಂತೆ ಆತನದು! ಎರಡು ತಲೆಮಾರುಗಳ ಹಿಂದಿನ ಕಾಲದಲ್ಲಿ ನೂರಕ್ಕೂ ಮಿಕ್ಕಿ ಒಂಟೆಗಳು, ಕುರಿಮಂದೆಗಳು, ಕುದುರೆಗಳು ಮತ್ತು ಕತ್ತೆಗಳನ್ನು ಹೊಂದಿದ್ದ ಶ್ರೀಮಂತ ಕುಟುಂಬವಂತೆ!

ಈ ಅಬ್ದುಲ್ಲ ಈಗ ನಮ್ಮ ಕಂಪೆನಿಯಲ್ಲಿ ವಾಚ್‌ಮ್ಯಾನ್. ಪಟ್ಟಣದಿಂದ ಇನ್ನೂರು ಕಿ. ಮೀ. ದೂರ, ನಡು ಮರುಭೂಮಿಯಲ್ಲಿದ್ದ ನಮ್ಮ ಗೋದಾಮಿನ ಕಾವಲುಭಟ. ಯಾವುದೋ ಮಲ್ಟಿನ್ಯಾಷನಲ್ ಕಂಪೆನಿಯ ಸಹಯೋಗದೊಂದಿಗೆ ಕಾರ್ಖಾನೆ ಸ್ಥಾಪಿಸಲು ಕಟ್ಟಿ ಹಾಕಿದ್ದ ಕಟ್ಟಡಗಳ ಸಮುಚ್ಚಯ ಅದು. ಕಾರ್ಖಾನೆಯ ಪ್ಲಾನ್

